ಇರುತ್ತವೆ. ಭಾರತೀಯ ಪದ್ಧತಿಯ ಔಷಧಿಗಳನ್ನು ಹೆಚ್ಚು ಉಪಯೋಗಿಸುವ ಹಾಗೆ ಸರ್ಕಾರ ಗಮನ ಹರಿಸಿದರೆ ನಿಜವಾಗಿ ಜನಕ್ಕೆ ಉಪಯೋಗತ್ತದೆ. ಅದಕ್ಕೋಸ್ಕರ ಈ 18 ಸಾವಿರ ರೂಪಾಯಿಗಳನ್ನು ಏನಾದರೂ 50 ಸಾವಿರ, 60 ಸಾವಿರ ರೂಪಾಯಿಗಳವರೆಗೆ, ಏನಾದರೂ ಒಂದೊಂದು ಯುನಾನಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀಮತಿ ನಫೀಸ ಫಜಲ್ : ಇದೇ ಪ್ರಶ್ನೆಗೆ ಒಂದು ವಾರದ ಹಿಂದೆ ನಾನು ಇದೇ ಸದನದಲ್ಲಿ ಉತ್ತರಿಸಿದ್ದೆ. ಯಾರೋ ಮಾನ್ಯ ಸದಸ್ಯರು 18 ಸಾವಿರ ರೂ.ಗಳನ್ನು ಕೊಡುತ್ತಿದ್ದೀರಾ ಎಂದು ಕೇಳಿದ್ದಕ್ಕೆ ನಾನು ಹೌದು ಎಂದು ಹೇಳಿದೆ. ನಮ್ಮ ನಿಯಮಗಳ ಪ್ರಕಾರ ನಾವು ಈಗ ಕೊಡುತ್ತಿದ್ದೇವೆ. ಹೆಚ್ಚಿನ ಬೇಡಿಕೆ ಬಂದರೆ ನಾವು ಪರಿಶೀಲನೆ ಮಾಡಿ ನಾವು ಹೆಚ್ಚು ಕೊಡಲಿಕ್ಕೆ ತಯಾರಿದ್ದೇವೆ. ಮತ್ತು ನಮ್ಮ ಮಾನ್ಯ ಸದಸ್ಯರು ಏನೇನು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ನಾನು ಒಪ್ಪಿದ್ದೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಪಾಪಣ್ಣನವರು. ಮಾನ್ಯ ಗುಂಡಪ್ಪ ವಕೀಲ್‌ರದ್ದು ಟ್ರಾನ್ಸ್‌ಫರ್ ಆಗಿದೆ ಜೊತೆಗೆ ಮಾನ್ಯ ಸದಸ್ಯರು ಈಗ ಇಲ್ಲಿ ಇಲ್ಲ. ಹೀಗಾಗಿ ನೀವು ಕೇಳಿ.

ಹುಣಸೂರು ಪಟ್ಟಣದಲ್ಲಿ ಹೌಸಿಂಗ್ ಬೋರ್ಡ್‌ನವರು ವಿತರಿಸಿರುವ ಮನೆಗಳಿಗೆ ಹೆಚ್ಚಿನ ಹಣ ವಸೂಲ್ಮಾಡುತ್ತಿರುವ ಬಗ್ಗೆ

524 (4721) : ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ಪಟ್ಟಣದಲ್ಲಿ ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ವಿತರಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಪ್ರತಿಯೊಂದು ಮನೆಗೆ ತಾರಮ್ಮ ಧಾರಣೆ ಹಾಕಿ ಮನೆ ಒಡೆಯರಿಗೆ ಕಿರುಕುಳ ಕೊಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಹೌದು.

ಆ) ಇಲ್ಲ. ಆದರೆ, ಹುಣಸೂರು ಕಾಲೋನಿಯಲ್ಲಿ ಒಟ್ಟು 4 ಹಂತದಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಪ್ರತಿ ಹಂಚಿಕೆದಾರರಿಗೂ ಮೊದಲು ಅಂದರೆ ಹಂಚಿಕೆ ಸಮಯದಲ್ಲಿ ತಾತ್ಕಾಲಿಕ ಬೆಲೆ ನಮೂದಿಸಿ ಹಂಚಿಕೆಯನ್ನು ಮಾಡಲಾಗಿರುತ್ತದೆ. ಈ ಹಂಚಿಕೆದಾರರಿಗೆ ಗುತ್ತಿಗೆ ಕರಾರು ಪತ್ರ ಮಾಡಿಕೊಂಡ ದಿನಾಂಕದವರೆಗೆ ಬಡ್ಡಿಯನ್ನು ಲೆಕ್ಕ ಮಾಡಿ ಅಂತಿಮ ಬೆಲೆ ತಿಳಿಸಲಾಗಿದೆ. ಇದರಿಂದಾಗಿ ಪ್ರತಿ ಹಂಚಿಕೆದಾರರಿಗೆ ಬೇರೆ ಬೇರೆಯಾಗಿ ಅಂತಿಮ ಬೆಲೆ ನಿಗಧಿಗೊಳಿಸಲಾಗಿರುತ್ತದೆ. ಹಾಗೂ ಕೆಲವು ಹಂಚಿಕೆದಾರರು ಗುತ್ತಿಗೆ ಕರಾರು ಪಡೆದ ನಂತರ ಬಾಕಿ ಇರುವ ಸಾಲವನ್ನು ಸರಿಯಾಗಿ ಪಾವತಿಸದ ಕಾರಣ ಇವರಿಗೆ ಬಡ್ಡಿ ಸುಸ್ತಿ ಬಡ್ಡಿ ವಿಧಿಸಲಾಗಿರುತ್ತದೆ. ಇದನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಂಡಿರುವುದರಿಂದ, ಅಲ್ಲಿನ ಹಂಚಿಕೆದಾರರು ಕಿರುಕುಳ ಕೊಡುತ್ತಿದ್ದಾರೆ ಎಂದು ಭಾವಿಸಿರುತ್ತಾರೆ. ಆದರೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ಯಾವುದೇ ಕಿರುಕುಳ ನೀಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಏನು ಪ್ರಶ್ನೆ ಕೇಳಿದ್ದೆ ಎಂದರೆ, ಹೌಸಿಂಗ್ ಬೋರ್ಡ್‌ನಿಂದ ಒಬ್ಬ ಫಲಾನುಭವಿಗೆ ಮನೆಯನ್ನು ಅಲಾಟ್ ಮಾಡುವಾಗ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳೆಂದು ನಿಗದಿ ಮಾಡಿಕೊಟ್ಟಿದ್ದಾರೆ. ಈಗ ಕನಿಷ್ಠ ಮೂರು ಲಕ್ಷ, ನಾಲ್ಕು ಲಕ್ಷ ರೂ.ಗಳನ್ನು ಕಟ್ಟಿದ್ದರೂ ಕೂಡ ಇನ್ನೂ ಹಣ ಕಟ್ಟಬೇಕೆಂದು ಇವರು ಹೋಗಿ ಅವರ ಪಾತ್ರೆ, ಬಟ್ಟೆ, ತೆಗೆದು ಅಚೆ ಹಾಕಿ ಬಹಳ ತೊಂದರೆ ಕೊಡುತ್ತಿದ್ದಾರೆ. ಇವರೇನು ಹೇಳುತ್ತಾರೆಂದರೆ, ಅವರು ಯಾವತ್ತು ಅಗ್ರಿಮೆಂಟ್ ಮಾಡಿ ಕೊಂಡಿದ್ದರು ಆ ದಿನದಿಂದ ನಾವು ಲೆಕ್ಕ ಹಾಕುತ್ತೇವೆಂದು ಹೇಳುತ್ತಾರೆ, ಹಣ ತೆಗೆದುಕೊಂಡಾಗ ಅಂದರೆ ಒಂದು ಲಕ್ಷ ರೂ.ಗಳನ್ನು ತೆಗೆದುಕೊಂಡಾಗ ಅಗ್ರಿಮೆಂಟ್ ಇಲ್ಲ, ಹಣ ಕೊಟ್ಟ ದಿವಸ ಇವರು ಅಗ್ರಿಮೆಂಟ್ ಮಾಡಿಲ್ಲ, ಇವರಿಗೆ ಯಾವಾಗ ಬೇಕೋ ಆಗ ಅಗ್ರಿಮೆಂಟ್ ಮಾಡಿದ್ದಾರೆ. ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಇಲಾಖಾಧಿಕಾರಿಗಳು ಇವರನ್ನ ಅವರ ಕೈಗೆ ಹಾಕಿಕೊಳ್ಳುವುದಕ್ಕೋಸ್ಕರ ಮಾಡುತ್ತಾರೆ ವಸತಿ ಸಚಿವರಲ್ಲಿ ನನಗೆ ವಿಶ್ವಾಸ ಇದೆ ದಯವಿಟ್ಟು ಅವರನ್ನು ಕರೆದು ತನಿಖೆ ಮಾಡಿ ಫಲಾನುಭವಿಗಳಿಗೆ ಸಹಕರಿಸಿ ಅನುಕೂಲ ಮಾಡಿಕೊಡಬೇಕೆಂದು ಅವರಲ್ಲಿ ನಾನು ಮನವಿ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮನೆಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಒಂದು ತಾತ್ಕಾಲಿಕ ಬೆಲೆ ಎಂದು ನಿಗದಿಪಡಿಸಿ ಮನೆಗಳನ್ನು ವಿತರಣೆ ಮಾಡುತ್ತೇವೆ. ಆ ಬಡಾವಣೆ ಅಭಿವೃದ್ಧಿ ಆಗಬೇಕಾದುದು, ಕೆಲವು ಬಡಾವಣೆಗಳಲ್ಲಿ ಬೀದಿ ದೀಪ ಇರುವುದಿಲ್ಲ, ಡಾಂಬರೀಕರಣ ಆಗಿರುವುದಿಲ್ಲ, ಚರಂಡಿಗಳು ಆಗಿರುವುದಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯಿರುವುದಿಲ್ಲ, ಒಳಚರಂಡಿ ವ್ಯವಸ್ಥೆಯಿರುವುದಿಲ್ಲ. ಈ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವಂಥದ್ದರ ಬಗ್ಗೆ ಆ ಬಡಾವಣೆಗಳಲ್ಲಿ ವಾಸಿಸುವಂಥ ಆ ಮನೆಯ ಮಾಲೀಕರು ಬೇಡಿಕೆ ಇಡುತ್ತಾರೆ. ಬೇಡಿಕೆಗಳನ್ನು ಇಟ್ಟು ಇವುಗಳನ್ನು ಈಡೇರಿಸುವಂಥ ಸಂದರ್ಭದಲ್ಲಿ ಮನೆಯ ಬೆಲೆ ತಾನಾಗಿ ಮೇಲೆ ಹೋಗುವಂಥದ್ದು ಸ್ವಭಾವಿಕ. ಆದರೆ ಇವತ್ತು ಇವರು ಹೇಳುತ್ತಾರೆ, ಅವರು ಹೇಳುವಂಥದ್ದು ನೀವು ಅಲಾಟೀಸ್‌ಗೆ ಕಿರುಕುಳ ಕೊಡುತ್ತೀರಿ ಎಂದು ಹೇಳುತ್ತಾರೆ, ನಾವು ಕಿರುಕುಳ ಕೊಡುತ್ತಿಲ್ಲ. ನಾವೇನು ಪ್ರಥಮವಾಗಿ ಕೊಟ್ಟಿದ್ದಂಥ ಬೆಲೆ, ತಾತ್ಕಾಲಿಕ ಬೆಲೆ ನಿಗದಿ ಪಡಿಸಿದ್ದೆವೋ, ಅದು ಅಂತಿಮ ಬೆಲೆ ಎಂದು ನಾವು ನೋಟೀಸ್ ಕೊಡುತ್ತೇವೆ, ಇದರಲ್ಲಿ ಹತ್ತಾರು ಜನ ದುಡ್ಡೇ ಕಟ್ಟಿರುವುದಿಲ್ಲ. ಆದುದರಿಂದ ನಾವೀಗ ಈ ಅಲಾಟೀಸ್‌ಗೆ ಅನುಕೂಲವಾಗುವಂತೆ, 16 ಸಾವಿರ ಜನ ಈ ರಾಜ್ಯದಲ್ಲಿ ಇಂಥ ಅಲಾಟೀಸ್‌ಗಳು ಇದ್ದಾರೆ. ಅವರಿಗೆ ಒನ್ ಟೈಮ್ ಸೆಟ್ಲಮೆಂಟ್ ಎಂದು ಕೆಲವು ರಿಯಾಯಿತಿ ಕೊಡುವುದರ ಬಗ್ಗೆ ನಾವು ಈಗಾಗಲೇ ಪೋಷಣೆ ಮಾಡಿದ್ದೇವೆ. ಅದರಲ್ಲಿ ವಿಶೇಷವಾಗಿ, ಇಡಬ್ಲೂಎಸ್ ಮನೆಗಳಿಗಾದರೆ ಲಕ್ಷಕ್ಕೆ ಶೇಕಡ 35ರಷ್ಟು ರಿಯಾಯಿತಿ, ಎಲ್‌ಐಜಿ ಮನೆಗಳಿಗೆ ಶೇಕಡ 30ರಷ್ಟು ರಿಯಾಯಿತಿ, ಎಂಐಜಿಗೆ ಶೇಕಡ 20ರಷ್ಟು ರಿಯಾಯಿತಿ ಕೊಡುವುದರ ಬಗ್ಗೆ ನಿರ್ಣಯಿಸಿದ್ದೇವೆ, ಹೆಚ್‌ಐಜಿಗೆ ಶೇಕಡ 15ರಷ್ಟು ರಿಯಾಯಿತಿ ಕೊಡುವುದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ, ಉಳಿದಂಥ ಒಂದು ಹೊಸ ಯೋಜನೆಯನ್ನು ಜಾರಿಗೆ ತರುವಂಥದ್ದರ ಬಗ್ಗೆ ಸರ್ಕಾರದ ಹಾಗೂ ಇಲಾಖೆಯ ಚಿಂತನೆ ಇದೆ. ನಾವೇನು ಸುಸ್ತಿಬಡ್ಡಿಯನ್ನು ವಿಧಿಸಿದ್ದೇವೆ, ಇದನ್ನು ರಿಯಾಯಿತಿ ಕೊಡುವುದರ ಬಗ್ಗೆ ಈಗಾಗಲೇ ನನ್ನ ಮುಂದೆ ಹಾಗೂ ಮಂಡಳಿಯ ಮುಂದೆ ವಿಷಯ ಇದೆ. ಈ ಬಗ್ಗೆಯೂ ಸಹ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದರ ಬಗ್ಗೆಯೂ ಸಹ ಇಲಾಖೆ ಹಾಗೂ ಸರ್ಕಾರ ಚಿಂತನೆ ಮಾಡುತ್ತಿದೆ, ಈ ನಿರ್ಣಯವನ್ನು

ಕೆಲವೇ ದಿನಗಳಲ್ಲಿ ನಾವು ಮಾಡಿಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ವಿ. ಪಾಪಣ್ಣ : ನನ್ನ ಕ್ಷೇತ್ರದಲ್ಲಿ ಹುಣಸೂರು ಪಟ್ಟಣದಲ್ಲಿ ಒಂದು ಹೌಸಿಂಗ್ ಬೋರ್ಡ್ ಕಾಲೋನಿ ಇದೆ. ಅಲ್ಲಿ ಇವತ್ತಿಗೂ ಕೂಡ ಒಳಚರಂಡಿ ವ್ಯವಸ್ಥೆಯನ್ನು ಇಲಾಖೆಯವರು ಮುನಿಸಿಪಾಲಿಟಿಗೆ ವಹಿಸಿಕೊಟ್ಟಿಲ್ಲ. ಅಲ್ಲಿ ಒಳಚರಂಡಿ ಸರಿಯಾದ ವ್ಯವಸ್ಥೆಯಿಲ್ಲದೇ ಮ್ಯಾನ್‌ಹೋಲ್‌ನಿಂದ ಈಚೆಗೆ ನೀರು ಬಂದು ಗಬ್ಬೆದ್ದು ಕುಳಿತಿದೆ. ಮತ್ತೊಂದು ಏನು ಮಾಡಿದ್ದಾರೆಂದರೆ, ಯಾರೋ ಕಂಟ್ರಾಕ್ಟ್‌ದಾರರು ಮುಂದೆ ಒಂದು ರೋಲ್ ಮನೆ ಕಟ್ಟಿದರು, ಹಿಂದೆ ಒಂದು ರೋಲ್ ಮನೆ ಕಟ್ಟಿದರು, ಮಧ್ಯೆ ಅಲ್ಲಿ ಒಳಚರಂಡಿ ಹೋಯಿತು, ಅವರು ಏನ್ಮಾಡಿದರು ಎಂದರೆ, ಅವರು 10 ಅಡಿ ಜಾಸ್ತಿ ಕಟ್ಟಬೇಕೆಂದು ಹೇಳಿದ್ದಕ್ಕೆ ಅದರ ಮೇಲೆ ಕಟ್ಟಡ ಕಟ್ಟಿಬಿಟ್ಟರು.

4.20 ಪಿಎಂ

ಒಳಚರಂಡಿಯ ಮೇಲೆ ಅಡಿಗೆ ಮನೆಯ ಕಟ್ಟಡವನ್ನು ಕಟ್ಟಿಕೊಂಡಿದ್ದಾರೆ. ಇದನ್ನು ನಿಮ್ಮ ಇಲಾಖೆಯವರು ಮಾಡಿದ್ದಾರೆ. ನಿಮ್ಮ ಇಲಾಖೆಯವರು ಅಲ್ಲಿ ಏನು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ತಾವು ಅಲ್ಲಿಗೆ ಬಂದು ನೋಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಮಾನ್ಯ ಸಚಿವರ ಮೇಲೆ ನಮಗೆ ವಿಶ್ವಾಸ ಇದೆ. ಆದರೆ, ನಿಮ್ಮ ಇಲಾಖೆಯ ಅಧಿಕಾರಿಗಳ ಮೇಲೆ ವಿಶ್ವಾಸ ಇಲ್ಲ. ಆದ್ದರಿಂದ ಅವರ ಪರವಾಗಿ ತಾವು ಏನನ್ನು ಹೇಳುವುದಕ್ಕೆ ಬರಬೇಡಿ. ಈ ಸಂದರ್ಭದಲ್ಲಿ ನಾನು ತಮಗೆ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಒಂದು ಅಲ್ಲಿಗೆ ಬಂದು ಪರಿಶೀಲನೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ನನಗೆ ಭರವಸೆ ಕೊಡಿ. ತಾವು ಯಾವತ್ತು ಅಲ್ಲಿಗೆ ಬರುತ್ತೇನೆಂದು ನನಗೆ ತಿಳಿಸಿದರೆ ಆ ದಿವಸ ನಾನೂ ಸಹ ಅಲ್ಲಿರುತ್ತೇನೆ. ತಾವು ದಯವಿಟ್ಟು ಅಲ್ಲಿಗೆ ಬಂದು ಅಲ್ಲಿರತಕ್ಕಂಥವರ ಕಷ್ಟ ಸುಖಗಳನ್ನು ನೋಡಿ ಅವರು ಏನು ಕೇಳುತ್ತಾರೆಯೋ ಆ ರೀತಿಯಲ್ಲಿ ದಯಮಾಡಿ ತಾವು ಸಟ್ಲ್‌ಮೆಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನು ಅವರ ಕ್ಷೇತ್ರಕ್ಕೆ ಭೇಟಿ ಕೊಟ್ಟು ಅವರು ಹೇಳಿರತಕ್ಕಂಥ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸರಿ ಪಡಿಸಿಕೊಡುತ್ತೇನೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ.....

ಅಧ್ಯಕ್ಷರು : ಇದು ಕೇವಲ ಹುಣಸೂರು ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥದ್ದು. ತಾವು ದಯವಿಟ್ಟು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್‌ರವರದ್ದು ಇದೆ. ಅವರು ಬಂದಿಲ್ಲವೆಂದು ಕಾಣುತ್ತದೆ. ಮತ್ತೆ ಮಾನ್ಯ ನಾರಾಯಣ ಸ್ವಾಮಿಯವರೂ ಕೂಡ ಬಂದಿಲ್ಲ. ಮತ್ತೆ ಮಾನ್ಯ ಪ್ರಕಾಶ್ ಖಂಡ್ರೆಯವರ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳಿ ಎಂದು ಸ್ವತಃ ಅವರೇ ಹೇಳಿದ್ದಾರೆ. ಮುಂದಿನ ಪ್ರಶ್ನೆಯನ್ನು ಮಾನ್ಯ ಯೋಗೀಶ್ ಭಟ್‌ರವರೇ ಕೇಳಿ.

ಮಂಗಳೂರಿನಲ್ಲಿರುವ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ವೈದ್ಯರುಗಳಿಗೆ ಮರಣೋತ್ತರ ಶವ ಪರೀಕ್ಷೆಗೆ ಅವಕಾಶ ಕಲ್ಪಿಸುವ ಕುರಿತು.

528 (4750) : ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?